**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ತರೀಕೆರೆ**

**ಸಿ.ಸಿ.ನಂ. 1200/2023**

ಸಾಕ್ಷಿಯ ಹೆಸರು : ಹರೀಶ ಸಿಡಬ್ಲ್ಯೂ - 4

ತಂದೆಯ ಹೆಸರು : ಬಸವರಾಜ್ ಕೆ ಪಿಡಬ್ಲ್ಯೂ - 1

ವಯಸ್ಸು : 35 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : **ತರೀಕೆರೆ**

**ದಿನಾಂಕ: 12-02-2024 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ: ಮಾನ್ಯ ಸ. ಸ. ಅ. ರವರಿಂದ:-**

ಚಾ.ಸಾ-1 ಮತ್ತು 9 ಇವರ ಪರಿಚಯ ಇದೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ. ದಿ:27-11-2022 ರ ಪಂಚನಾಮೆಯ ಮೇಲೆ ನನ್ನ ಸಹಿ ಇದೆ ಎಂದು ಹೇಳುತ್ತಾರೆ, ಅವುಗಳನ್ನು ಕ್ರಮವಾಗಿ ನಿ.ಪಿ-1 ಮತ್ತು 2 ಎಂದು, ಸಹಿಗಳನ್ನು ನಿ.ಪಿ -1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು. ನಿ.ಪಿ-1 ಕ್ಕೆ ಅಪಘಾತ ನಡೆದ ಸ್ಥಳದಲ್ಲಿ ಪೊಲೀಸರು ಪಂಚನಾಮೆ ಮಾಡಿದಾಗ ಮಾಡಿರುತ್ತೇನೆ ಮತ್ತು ನಿ.ಪಿ-2 ಕ್ಕೆ ತರೀಕೆರೆ ಪೊಲೀಸ್ ಠಾಣೆಯಲ್ಲಿ ವಾಹನ ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಮಾಡಿದ್ದೇನೆ. ಈಗ ತೋರಿಸುತ್ತಿರುವ ಪೋಟೋಗಳಲ್ಲಿ ನಾನು ಇದ್ದೇನೆ, ಅವುಗಳನ್ನು ನಿ.ಪಿ-3 ಮತ್ತು 4 ಎಂದು ಗುರುತಿಸಲಾಯಿತು. ಬಸ್ಸು ನ ನಂಬರ್ ಬಹಳ ದಿನಗಳು ಆಗಿರುವ ಕಾರಣ ನನಗೆ ನೆನಪಿಲ್ಲ. ನನ್ನ ಸ್ನೇಹಿತನ ತಂದೆ ಅಪಘಾತದಲ್ಲಿ ತೀರಿಕೊಂಡಿದ್ದಾರೆ. ನನ್ನ ಜೊತೆ ಚಾ.ಸಾ-1 ಮತ್ತು 9 ಕೂಡ ಪಂಚನಾಮೆಗೆ ಸಹಿ ಹಾಕಿದ್ದಾರೆ. ಅಪಘಾತಪಡಿಸಿದ ವಾಹನ ಶಿವಮೊಗ್ಗ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿತ್ತು.

**ಪಾಟೀ ಸವಾಲು: ಆರೋಪಿ ಪರ ವಕೀಲರವರಿಂದ:-**

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ಸಹಿ ಹಾಕುವ ಪೂರ್ವದಲ್ಲಿ ನಾನು ದಾಖಲೆಗಳನ್ನು ಓದಿರುವುದಿಲ್ಲ. ಪೊಲೀಸರು ತೋರಿಸಿದ ಸ್ಥಳದಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿ. ಚಾ.ಸಾ-**1** ನನ್ನ ಸ್ನೇಹಿತ ಆಗಿರುವ ಕಾರಣ ಆತನಿಗೆ ಸಹಾಯ ಮಾಡಲು ಅಪಘಾತದ ಬಗ್ಗೆ ಮಾಹಿತಿಯೇ ಇಲ್ಲದಿದ್ದರೂ ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತದ ಆದ ಕಾಲಕ್ಕೆ ಸ್ಥಳದ ಹತ್ತಿರ ಇರಲಿಲ್ಲ ಅಲ್ಲಿ ಯಾವುದೇ ಕಾರ್ ವಾಶ್ ಮಾಡುವ ಸರ್ವಿಸ್ ಸೆಂಟರ್ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ,

ಮರುವಿಚಾರಣೆ : ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)**

***ಓ ಹೇ ಕೇ ಸ ಇ ಎ ಒ***

Sd/-

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***